**II. ನಿಗಮದ ಆಡಳಿತಾತ್ಮಕ ವ್ಯವಸ್ಥೆ:–** ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮಕ್ಕೆ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 187 ಬಿಸಿಎ 2021, ದಿನಾಂಕ: 20.04.2022ರ ಆದೇಶದನ್ವಯ ಈ ಕೆಳಕಂಡ 14 ಹುದ್ದೆಗಳನ್ನು ಕೇಂದ್ರ ಕಛೇರಿಗೆ ಮಾತ್ರ ಸೃಜಿಸಲಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ನಿಗಮದ ಯೋಜನೆಗಳ ಅನುಷ್ಠಾನ ಕಾರ್ಯವನ್ನು ನಿರ್ವಹಿಸುತ್ತಾರೆ. ಮಂಜೂರಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

| ಕ್ರ ಸಂ | ವೃಂದ | ಸರ್ಕಾರ ಮಂಜೂರು ಮಾಡಿರುವ ಹುದ್ದೆಗಳು | ಭರ್ತಿಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| 1 | ಎ | 02 | 02 | – |
| 2 | ಬಿ | – | – | – |
| 3 | ಸಿ | 10 | 03 | 07 |
| 4 | ಡಿ | 02 | 01 | 01 |
| | **ಒಟ್ಟು** | **14** | **06** | **08** |

**ಪ್ರಸ್ತುತ ಕೇಂದ್ರ ಕಛೇರಿಗೆ ಮಂಜೂರಾದ ಹುದ್ದೆಗಳ ವಿವರ:**

| ಕ್ರ.ಸಂ | ಹುದ್ದೆಯ ಹೆಸರು | ವೃಂದ | ಸರ್ಕಾರ ಮಂಜೂರು ಮಾಡಿರುವ ಹುದ್ದೆಗಳು | ಭರ್ತಿಮಾಡಲಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|---|
| **1** | ವ್ಯವಸ್ಥಾಪಕ ನಿರ್ದೇಶಕರು | ಎ | 01 | 01 | – |
| **2** | ಕಂಪನಿ ಕಾರ್ಯದರ್ಶಿ | ಎ | 01 | 01 | – |
| **3** | ಕಛೇರಿ ಅಧೀಕ್ಷಕರು | ಸಿ | 01 | – | 01 |
| **4** | ಲೆಕ್ಕ ಸಹಾಯಕರು | ಸಿ | 01 | – | 01 |
| **5** | ಪ್ರಥಮ ದರ್ಜೆ ಸಹಾಯಕರು | ಸಿ | 01 | – | 01 |
| **6** | ದ್ವಿತೀಯ ದರ್ಜೆ ಸಹಾಯಕರು | ಸಿ | 02 | – | 02 |
| **7** | ಡಾಟಾ ಎಂಟ್ರಿ ಆಪರೇಟರ್ | ಸಿ | 03 | 03 (ಹೊರಗುತ್ತಿಗೆ) | 00 |
| **8** | ವಾಹನ ಚಾಲಕರು | ಸಿ | 02 | – | 02 |
| **9** | ಜವಾನರು | ಡಿ | 02 | 01 (ಹೊರಗುತ್ತಿಗೆ) | 01 |
| | **ಒಟ್ಟು** | | **14** | **06** | **08** |

1. **ಫಲಾನುಭವಿಗಳ ಆಯ್ಕೆ ಸಮಿತಿ:** ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ವಿಧಾನಸಭಾ ಕ್ಷೇತ್ರದ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಆಯ್ಕೆ ಸಮಿತಿಯ ಮೂಲಕ (1) ಸ್ವಯಂ ಉದ್ಯೋಗ ಸಾಲ ಯೋಜನೆ (2) ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನಕೊಳ್ಳಲು ಸಹಾಯಧನಯ ಯೋಜನೆ (3) ಗಂಗಾ ಕಲ್ಯಾಣ ನೀರಾವರಿ ಯೋಜನೆ. ಈ ಯೋಜನೆಗಳಿಗೆ ನಿಗದಿಪಡಿಸಿದ ಗುರಿಯಂತೆ ಫಲಾನುಭವಿಗಳನ್ನು ಆಯ್ಕೆಮಾಡಲಾಗುತ್ತದೆ.

2. **ಜಿಲ್ಲಾ ಆಯ್ಕೆ ಸಮಿತಿ:** ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಿದ್ದು, ಜಿಲ್ಲಾ ವ್ಯವಸ್ಥಾಪಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಈ ಆಯ್ಕೆ ಸಮಿತಿಯ ಮೂಲಕ ಶೈಕ್ಷಣಿಕ ಸಾಲ ಯೋಜನೆಯಲ್ಲಿ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.

3. **ರಾಜ್ಯ ಮಟ್ಟದ ಆಯ್ಕೆ ಸಮಿತಿ:** ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮದಲ್ಲಿ ಫಲಾನುಭವಿಗಳ ಆಯ್ಕೆಗೆ ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿರುತ್ತದೆ. ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಾರೆ.

**III. 2022–23ನೇ ಸಾಲಿನ ಆಯವ್ಯಯ ಮತ್ತು ಕ್ರಿಯಾ ಯೋಜನೆ:** ರಾಜ್ಯ ಸರ್ಕಾರವು 2022–23ನೇ ಸಾಲಿನ ಪೂರಕ ಆಯವ್ಯಯ–1ರಲ್ಲಿ ಅನುದಾನ ಲೆಕ್ಕ ಶೀರ್ಷಿಕೆ 2225–03–190–0–10–100ರಲ್ಲಿ ರೂ.10,500.00 ಲಕ್ಷಗಳನ್ನು ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಒದಗಿಸಿದೆ.

**ಈ ಮೊತ್ತದಲ್ಲಿ ಕೆಳಕಂಡಂತೆ ಯೋಜನೆಗಳಿಗೆ ಹಾಗೂ ಆಡಳಿತಾತ್ಮಕ ವೆಚ್ಚಕ್ಕೆ ಹಂಚಿಕೆ ಮಾಡಲಾಗಿರುತ್ತದೆ.**

**(ರೂ.ಲಕ್ಷಗಳಲ್ಲಿ)**

| **ಕ್ರ.ಸಂ** | **ಯೋಜನೆ** | **ಆರ್ಥಿಕ ಗುರಿ** | **ಭೌತಿಕ ಗುರಿ** |
|---|---|---|---|
| 1 | ಒಕ್ಕಲಿಗರ ಸ್ವಯಂ ಉದ್ಯೋಗ ಯೋಜನೆ | 2,905.00 | 5810 |
| 2 | ಗಂಗಾ ಕಲ್ಯಾಣ ಯೋಜನೆ | 4,350.00 | 1706 |
| 3 | ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆ | 1,536.00 | 512 |
| 4 | ಸ್ವಾತಂತ್ರ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಲ್ಲಿ ನಿರುದ್ಯೋಗಿ ಯುವಕ/ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ | 750.00 | 7500 |
| 5 | ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಗೆ ಅರಿವು ಶೈಕ್ಷಣಿಕ ಸಾಲ. (ವಾರ್ಷಿಕ ರೂ.1.00 ಲಕ್ಷದಂತೆ) | 654.00 | 654 |
| 6 | ವಿದೇಶಿ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. (ವಾರ್ಷಿಕ ರೂ.3.50 ಲಕ್ಷದಂತೆ) | 200.00 | 57 |
| 7 | ಐ.ಇ.ಸಿ. (ಮಾಹಿತಿ ಶಿಕ್ಷಣ ಮತ್ತು ಸಂವಹನ) ಚಟುವಟಿಕೆಗಳಿಗೆ ಶೇ.5 ರಷ್ಟು ಹಾಗೂ ಶೇ.3 ರಷ್ಟನ್ನು ಐಟಿ (ಗಣಕೀಕರಣ ಚಟುವಟಿಕೆಗಳಿಗೆ), ಶೇ.2 ರಷ್ಟನ್ನು ಸಿಬ್ಬಂದಿ ತರಬೇತಿಗೆ ಒಟ್ಟು ಶೇ.10 ರಷ್ಟು ಮೀಸಲಿಡತಕ್ಕದ್ದು. | 105.00 | – |
| | **ಒಟ್ಟು** | **10,500.00** | **16,239** |

**IV. ಯೋಜನೆಗಳ ವಿವರ:–**

ಒಕ್ಕಲಿಗ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಒಕ್ಕಲಿಗ ಸಮುದಾಯಕ್ಕೆ ಸೇರಿದ ಜನರ ಆರ್ಥಿಕಾಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಅನುದಾನದಿಂದ ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತದಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಈ ರೀತಿ ಇದೆ.

**1. ಸ್ವಯಂ ಉದ್ಯೋಗ ಯೋಜನೆ:–**

ಸ್ವಯಂ ಉದ್ಯೋಗಕ್ಕೆ ಒಕ್ಕಲಿಗ ಸಮುದಾಯದ ಜನರು ಆರ್ಥಿಕ ಚಟುವಟಿಕೆ ಕೈಗೊಳ್ಳಲು ಚಟುವಟಿಕೆ ಅನುಸಾರ ಗರಿಷ್ಠ ರೂ. 2.00 ಲಕ್ಷಗಳವರೆಗೆ ಆರ್ಥಿಕ ನೆರವು. ಇದರಲ್ಲಿ, ಗರಿಷ್ಠ ಶೇ.15ರಷ್ಟು ಸಹಾಯಧನ,

ಉಳಿಕೆ ಮೊತ್ತ ವಾರ್ಷಿಕ ಶೇ4ರ ಬಡ್ಡಿ ದರದಲ್ಲಿ ಸಾಲ. 2022–23ನೇ ಸಾಲಿಗೆ 2810 ಫಲಾನುಭವಿಗಳಿಗೆ ರೂ.2905.00 ಲಕ್ಷ ರೂಗಳ ಸೌಲಭ್ಯ ಒದಗಿಸುವ ಗುರಿಹೊಂದಿದೆ.

2. **ಗಂಗಾ ಕಲ್ಯಾಣ ನೀರಾವರಿ ಯೋಜನೆ:–**

ಪ್ರವರ್ಗ–, 3ಎ ನಲ್ಲಿ ಬರುವ ಒಕ್ಕಲಿಗ ಸಮುದಾಯಕ್ಕೆ ಸೇರಿದ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನುಗಳಿಗೆ ಕೊಳವೆ ಬಾವಿ ಕೊರೆಯಿಸಿ, ಪಂಪ್‌ಸೆಟ್ ಉಪಕರಣಗಳನ್ನು ಸರಬರಾಜು ಮಾಡಿ ವಿದ್ಯುತ್ ಸಂಪರ್ಕ ಕಲ್ಪಿಸಿ, ನೀರಾವರಿ ಸೌಲಭ್ಯ ಒದಗಿಸಲಾಗುವುದು. ಘಟಕ ವೆಚ್ಚ ರೂ.2.50 ಲಕ್ಷಗಳಲ್ಲಿ ರೂ.2.00 ಲಕ್ಷಗಳ ಸಹಾಯ ಧನ ಹಾಗೂ ರೂ.50.000 /–ಗಳ ಶೇ.4 ರ ಬಡ್ಡಿದರದಲ್ಲಿ ಸಾಲ. ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಜಿಲ್ಲೆಗಳಲ್ಲಿ ವೈಯಕ್ತಿಕ ಕೊಳವೆಬಾವಿಯ ಘಟಕ ವೆಚ್ಚ ರೂ.4.00 ಲಕ್ಷಗಳು, ಇದರಲ್ಲಿ ವಿದ್ಯುದೀಕರಣಕ್ಕೆ ಪ್ರತೀ ಕೊಳವೆಬಾವಿಗೆ ರೂ.50,000/–ಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಲಾಗುವುದು. 2022–23ನೇ ಸಾಲಿಗೆ 1706 ಫಲಾನುಭವಿಗಳಿಗೆ ರೂ.4350.00 ಲಕ್ಷಗಳ ವೆಚ್ಚದಲ್ಲಿ ನೀರಾವರಿ ಸೌಲಭ್ಯ ಒದಗಿಸುವ ಗುರಿಹೊಂದಿದೆ.

3. **ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯ ಧನ ಯೋಜನೆ:**

ಒಕ್ಕಲಿಗ ಸಮುದಾಯಕ್ಕೆ ಸೇರಿದ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಟೂರಿಸ್ಟ್ ಟ್ಯಾಕ್ಸ್ ಅಥವಾ ಸರಕು ಸಾಗಾಣಿಕೆ ವಾಹನ ಕೊಳ್ಳಲು ನಿಗಮದಿಂದ ಬ್ಯಾಂಕು ಮಂಜೂರು ಮಾಡುವ ಸಾಲದ ಮೊತ್ತದ ಶೇ.50 ರಷ್ಟು ಗರಿಷ್ಟ ರೂ.3.00 ಲಕ್ಷಗಳ ಸಹಾಯ ಧನವನ್ನು ನಿಗಮದಿಂದ ಮಂಜೂರು ಮಾಡುವುದು ಉಳಿಕೆ ಮೊತ್ತ ಬ್ಯಾಂಕ್ ಪಾಲಿನ ಸಾಲವಾಗಿರುತ್ತದೆ. 2022–23ನೇ ಸಾಲಿಗೆ 512 ಫಲಾನುಭವಿಗಳಿಗೆ ರೂ.1536.00 ಲಕ್ಷಗಳ ಸಹಾಧನ ಸೌಲಭ್ಯ ಒದಗಿಸುವ ಗುರಿಹೊಂದಿದೆ.

4. **ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಕೌಶಲ್ಯಾಭಿವೃದ್ದಿ ತರಬೇತಿ ಯೋಜನೆ:**

ಒಕ್ಕಲಿಗ ಸಮುದಾಯದ ವಿದ್ಯಾವಂತ ಯುವಜನರಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಸರ್ಕಾರದ ಸಂಸ್ಥೆಗಳಾದ ITIs, GTTC, KGTTI ಗಳ ಮೂಲಕ ವಿವಿಧ ಅಲ್ಪಾವಧಿ ಕೋರ್ಸ್‌ಗಳಲ್ಲಿ ತರಬೇತಿ ನೀಡಿ ಅವರ ಉದ್ಯೋಗ ಸಾಮರ್ಥ್ಯವನ್ನು ಹಾಗೂ ಸಾಮಾಜಿಕ/ಆರ್ಥಿಕ ಸ್ಥಿತಿಗಳ ಉನ್ನತೀಕರಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 2022–23ನೇ ಸಾಲಿಗೆ 7200 ಅಭ್ಯರ್ಥಿಗಳಿಗೆ ರೂ.750.00 ಲಕ್ಷಗಳ ವೆಚ್ಚದಲ್ಲಿ ತರಬೇತಿ ನೀಡುವ ಗುರಿ ಹೊಂದಿದೆ.

5. **ಶೈಕ್ಷಣಿಕ ಸಾಲ ಯೋಜನೆ:**

ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸುಗಳಾದ ಇಂಜನೀಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ ಉನ್ನತ ಕೋರ್ಸುಗಳ ವ್ಯಾಸಂಗಕ್ಕೆ ವಾರ್ಷಿಕ ರೂ.1.00 ಲಕ್ಷಗಳಂತೆ ಕೋರ್ಸ್‌ನ ಅವಧಿಗೆ ಗರಿಷ್ಠ ರೂ.4.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಶೇ.2ರಷ್ಟು ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದು. 2022–23ನೇ ಸಾಲಿಗೆ 654 ವಿದ್ಯಾರ್ಥಿಗಳಿಗೆ ರೂ.654.00 ಲಕ್ಷಗಳ ಸಾಲ ನೀಡುವ ಗುರಿ ಹೊಂದಿದೆ.

6. **ವಿದೇಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ:** ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಮಾಸ್ಟರ್ ಡಿಗ್ರಿ, ಪಿಹೆಚ್‌ಡಿ, ಪೋಸ್ಟ್ ಡಾಕ್ಟೋರಲ್ ಕೋರ್ಸುಗಳ ಪ್ರವೇಶ ಹೊಂದಿದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.3.50 ಲಕ್ಷಗಳಂತೆ 3 ವರ್ಷಗಳ ಅವಧಿಗೆ ಗರಿಷ್ಠ ರೂ.10.00

ಲಕ್ಷಗಳವರೆಗೆ ಶೇ.2ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವುದು. 2022–23ನೇ ಸಾಲಿಗೆ 57 ವಿದ್ಯಾರ್ಥಿಗಳಿಗೆ ರೂ.200.00 ಲಕ್ಷಗಳ ಸಾಲ ನೀಡುವ ಗುರಿಹೊಂದಿದೆ.

**V. 2022–23ನೇ ಸಾಲಿನ ಪ್ರಗತಿ:–**

ನಿಗಮದಿಂದ 2022–23ನೇ ಸಾಲಿನ ಯೋಜನೆಗಳಿಗೆ ನಿಗದಿಪಡಿಸಿದ ಗುರಿ ಹಾಗೂ ದಿನಾಂಕ:31.12.2022 ರವರೆಗೆ ಸಾಧಿಸಿದ ಪ್ರಗತಿ

**ಯೋಜನಾವಾರು ಗುರಿ ಮತ್ತು ಪ್ರಗತಿ (ಡಿಸೆಂಬರ್–2022 ರ ಅಂತ್ಯದವರೆಗೆ)**

( ರೂ.ಲಕ್ಷಗಳಲ್ಲಿ )

| ಕ್ರ. ಸಂ | ಯೋಜನೆ | ಆರ್ಥಿಕ ಗುರಿ | ಭೌತಿಕ ಗುರಿ | ಆಯ್ಕೆಯಾಗಿರುವ ಫಲಾನುಭವಿಗಳು | ಸ್ವೀಕರಿಸಿರುವ ಅರ್ಜಿಗಳು |
|---|---|---|---|---|---|
| 1 | ಒಕ್ಕಲಿಗರ ಸ್ವಯಂ ಉದ್ಯೋಗ ಯೋಜನೆ | 2,905.00 | 5810 | 1302 | 10667 |
| 2 | ಗಂಗಾ ಕಲ್ಯಾಣ ಯೋಜನೆ | 4,350.00 | 1706 | 316 | 4525 |
| 3 | ನಿರುದ್ಯೋಗಿ ಯುವಕರಿಗೆ ಟೂರಿಸ್ಟ್ ಟ್ಯಾಕ್ಸಿ / ಸರಕು ಸಾಗಾಣಿಕೆ ವಾಹನ ಕೊಳ್ಳಲು ಸಹಾಯಧನ ಯೋಜನೆ | 1,536.00 | 512 | 50 | 2870 |
| 4 | ಸ್ವಾತಂತ್ರ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಲ್ಲಿ ನಿರುದ್ಯೋಗಿ ಯುವಕ/ ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ | 750.00 | 7500 | 607 | 607 |
| 5 | ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಗೆ ಅರಿವು ಶೈಕ್ಷಣಿಕ ಸಾಲ. (ವಾರ್ಷಿಕ ರೂ.1.00 ಲಕ್ಷದಂತೆ) | 654.00 | 654 | 535 | 535 |
| 6 | ವಿದೇಶಿ ವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ. (ವಾರ್ಷಿಕ ರೂ.3.50 ಲಕ್ಷದಂತೆ) | 200.00 | 57 | – | 28 |
| 7 | ಐ.ಇ.ಸಿ. (ಮಾಹಿತಿ ಶಿಕ್ಷಣ ಮತ್ತು ಸಂವಹನ) ಚಟುವಟಿಕೆಗಳಿಗೆ ಶೇ.5 ರಷ್ಟು ಹಾಗೂ ಶೇ.3 ರಷ್ಟನ್ನು ಐಟಿ (ಗಣಕೀಕರಣ ಚಟುವಟಿಕೆಗಳಿಗೆ), ಶೇ.2 ರಷ್ಟನ್ನು ಸಿಬ್ಬಂದಿ ತರಬೇತಿಗೆ ಒಟ್ಟು ಶೇ.10 ರಷ್ಟು ಮೀಸಲಿಡತಕ್ಕದ್ದು. | 105.00 | – | – | – |
| | **ಒಟ್ಟು** | **10,500.00** | **16,239** | **2,810** | **18,670** |

ಈಗಾಗಲೇ ಮೇಲ್ಕಂಡಂತೆ ಕ್ರಮ ಸಂಖ್ಯೆ 1 ರಿಂದ 3 ರಲ್ಲಿರುವ ಯೋಜನೆಗಳಲ್ಲಿ ಮಾನ್ಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಮೂಲಕ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. **ಪ್ರಸ್ತುತ 41 ವಿಧಾನ** ಸಭಾ ಕ್ಷೇತ್ರಗಳಿಂದ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಸ್ವೀಕರಿಸಿದ್ದು, ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಶೈಕ್ಷಣಿಕ ಸಾಲ ಯೋಜನೆಯಲ್ಲಿ ಆನ್‌ಲೈನ್ ಮೂಲಕ 535 ಅರ್ಜಿಗಳು ಸ್ವೀಕೃತಗೊಂಡಿದ್ದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯ ಆಯ್ಕೆ ಮಾಡಿ ಕಳುಹಿಸುವಂತೆ ಜಿಲ್ಲಾ ವ್ಯವಸ್ಥಾಪಕರಿಗೆ ತಿಳಿಸಲಾಗಿರುತ್ತದೆ.

ಸ್ವಾತಂತ್ರ್ಯ ಅಮೃತ ಮುನ್ನಡೆ ತರಬೇತಿ ಯೋಜನೆಯಲ್ಲಿ 607 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕೌಶಲ್ಯಾಭಿವೃದ್ಧಿ ಮೂಲಕ ತರಬೇತಿಗೆ ನಿಯೋಜಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

# ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ

ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 193 ಬಿಸಿಎ 2020, ದಿನಾಂಕ 27.11.2020 ಮತ್ತು ಹಿಂವಕ 193 ಬಿಸಿಎ 2020, ದಿನಾಂಕ 7.9.2021ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ 30.03.2002ರ ಪ್ರಕಾರ, ಪ್ರವರ್ಗ 3–ಬಿ ಅಡಿಯಲ್ಲಿ 2(ಎ) ರಿಂದ 2(ಎಫ್) ವರೆಗೆ ಬರುವ (ಎ) ಮರಾಠ, ಮರಾಠ, (ಬಿ) ಅರೆಕ್ಷತ್ರಿ, ಅರೆಮರಾಠ, ಆರ್ಯಮರಾಠ (ಸಿ)ಆರ್ಯ, ಆರ್ಯರು (ಡಿ) ಕೊಂಕಣಮರಾಠ (ಇ) ಕ್ಷತ್ರಿಯ ಮರಾಠ/ಕ್ಷತ್ರಿಯ ಮರಾಠ (ಎಫ್) ಕುಳವಾಡಿ ಸಮುದಾಯಗಳಿಗೆ ಸೇರಿದ ಜನರ ಅಭಿವೃದ್ಧಿಗಾಗಿ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತವನ್ನು ಕಂಪೆನಿ ಕಾಯ್ದೆ, 2013ರ ಕಲಂ 7(2)ರ ಪ್ರಕಾರ ದಿನಾಂಕ 13.12.2021ರಂದು ನಿಗಮವನ್ನು ಸ್ಥಾಪಿಸಿ, ನೋಂದಣಿ ಮಾಡಲಾಗಿದೆ.

ಮರಾಠ ಸಮುದಾಯದ ಆರ್ಥಿಕವಾಗಿ ಶೈಕ್ಷಣಿಕವಾಗಿ ಮತ್ತು ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ, ಅವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸಾಲ ಸೌಲಭ್ಯ ಒದಗಿಸುವುದು ನಿಗಮದ ಉದ್ದೇಶವಾಗಿರುತ್ತದೆ.

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ 2022–23ನೇ ಸಾಲಿನ ವಾರ್ಷಿಕ ವರದಿಯು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

I. ನಿಗಮದ ನಿರ್ದೇಶಕ ಮಂಡಳಿ

II. ನಿಗಮದ ಆಡಳಿತಾತ್ಮಕ ವ್ಯವಸ್ಥೆ.

III. 2022–23ನೇ ಸಾಲಿನ ಆಯವ್ಯಯ ಮತ್ತು ಕ್ರಿಯಾಯೋಜನೆ.

IV. ಯೋಜನೆಗಳ ವಿವರಗಳು.

V. 2022–23ನೇ ಸಾಲಿನ ಕಾರ್ಯಕ್ರಮಗಳು ಪ್ರಗತಿ ತಃಖ್ತೆ.

VI. ಪೂರಕ ಆಯವ್ಯಯದಲ್ಲಿನ ಒದಗಿಸಿದ ಅನುದಾನ ವಿವರ

## I. ನಿಗಮದ ನಿರ್ದೇಶಕ ಮಂಡಳಿ

ನಿಗಮದಲ್ಲಿ ಆಡಳಿತ ಮೇಲ್ವಿಚಾರಣೆ ಮತ್ತು ಕಾರ್ಯನೀತಿ ರೂಪಿಸಲು ನಿರ್ದೇಶಕ ಮಂಡಳಿಯು ಕಾರ್ಯನಿರ್ವಹಿಸುತ್ತಿದೆ. ಈ ನಿರ್ದೇಶಕ ಮಂಡಳಿಯಲ್ಲಿ ಈ ಕೆಳಕಂಡ ಸದಸ್ಯರು ನಿರ್ದೇಶಕರಾಗಿರುತ್ತಾರೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 01. | ಡಾ. ಮಾರುತಿರಾವ್ ಗೋವಿಂದರಾವ್ ಮೂಳೆ (ಎಂ.ಜಿ. ಮೂಳೆ) ಮಾಜಿ ಶಾಸಕರು | ಅಧ್ಯಕ್ಷರು |
| 02 | ಶ್ರೀಮತಿ ತುಲಸಿ ಮದ್ದಿನೇನಿ, ಭಾ.ಆ.ಸೇ.<br>ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ನಿರ್ದೇಶಕರು |
| 03 | ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ನಿರ್ದೇಶಕರು |
| 04 | ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ. | ನಿರ್ದೇಶಕರು |
| 05 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿ. | ನಿರ್ದೇಶಕರು |
| 06 | ಸರ್ಕಾರದ ಉಪ ಕಾರ್ಯದರ್ಶಿಯವರು, (ಕಲ್ಯಾಣ), ಆರ್ಥಿಕ ಇಲಾಖೆ | ನಿರ್ದೇಶಕರು |
| 07 | ಶ್ರೀ ಅನಂತರಾವ್ ಬಾಲಾ ಸಾಹೇಬ ಘೋರ್ಪಡೆ,<br>ಡಂಗಿಗಲ್ಲಿ, ಮುಧೋಳ ನಗರ, ಬಾಗಲಕೋಟೆ ಜಿಲ್ಲೆ | ನಾಮ ನಿರ್ದೇಶಕರು |
| 08 | ಶ್ರೀ ರಾಜಶೇಖರರಾವ್ ಸೂರ್ಯವಂಶಿ ನಂ.654, 4ನೇ ಮುಖ್ಯರಸ್ತೆ, ಗಂಗೊಂಡನಹಳ್ಳಿ ಮೈಸೂರು ರಸ್ತೆ, ಬೆಂಗಳೂರು–39. ನಾಮ ನಿರ್ದೇಶಕರು | ನಾಮ ನಿರ್ದೇಶಕರು |

**II) ನಿಗಮದ ಆಡಳಿತಾತ್ಮಕ ವ್ಯವಸ್ಥೆ:**

ನಿಗಮದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಗೆ ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 134 ಬಿಎಂಎಸ್ 2021, ಬೆಂಗಳೂರು, ದಿನಾಂಕ: 26.07.2021.ರಲ್ಲಿ 03 ಗ್ರೂಪ್ 'ಎ' ಹುದ್ದೆಗಳನ್ನು ಹಾಗೂ ಒಂದು ಗ್ರೂಪ್ 'ಸಿ' ಹುದ್ದೆಯನ್ನು ಸೃಜಿಸಲಾಗಿದ್ದು ಇದರಲ್ಲಿ 01 ಗ್ರೂಪ್ 'ಎ' ಹುದ್ದೆಯನ್ನು ನಿಯೋಜನೆ ಮೇಲೆ ಪಡೆಯಲಾಗಿದ್ದು ಉಳಿದ ಹುದ್ದೆಗಳು ಖಾಲಿ ಇರುತ್ತದೆ ಹಾಗೂ ಹಾಗೂ ಮೂರು ಹುದ್ದೆಗಳನ್ನು (DEO–2 & Group 'D'-1) ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ ಜಿಲ್ಲೆಗಳಲ್ಲಿ ವಿಭಾಗೀಯ ಮತ್ತು ಜಿಲ್ಲಾ ಮಟ್ಟದಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿನ ಪ್ರಸ್ತುತ ಇರುವ ಸಿಬ್ಬಂದಿ ಮುಖಾಂತರವೇ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**III) 2022–23ನೇ ಸಾಲಿನ ಆಯವ್ಯಯ ಮತ್ತು ಕ್ರಿಯಾ ಯೋಜನೆ:**

ರಾಜ್ಯ ಸರ್ಕಾರವು 2022–23ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ನಿಗಮಕ್ಕೆ ಒದಗಿಸಿದ ರೂ.100.00 ಕೋಟಿಗಳಿಗೆ ಸಾಲ ಮತ್ತು ಸಹಾಯಧನದ ಸೌಲಭ್ಯ ಒದಗಿಸಲು ಕ್ರಿಯಾ ಯೋಜನೆ ರೂಪಿಸಿದೆ.

| ಕ್ರ. ಸಂ | ಕಾರ್ಯಕ್ರಮಗಳ ಹೆಸರು | ಭೌತಿಕ ಗುರಿ | ಆರ್ಥಿಕ ಗುರಿ (ಲಕ್ಷಗಳಲ್ಲಿ |
|---|---|---|---|
| 1 | ಜೀಜಾವು– ಜಲ ಭಾಗ್ಯ ಯೋಜನೆ (ಗಂಗಾ ಕಲ್ಯಾಣ ನೀರಾವರಿ ಯೋಜನೆ) | 960 | 2400.00 |
| 2 | ಶ್ರೀ ಶಹಜೀ ರಾಜೇ ಸಮೃದ್ಧಿ ಯೋಜನೆ (ಎಸ್.ಎಸ್.ಆರ್.ಎಸ್.ವೈ) (ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ) | 8706 | 4500.00 |
| 3 | ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ | 392 | 1000.00 |
| 4 | ಅರಿವು ಶೈಕ್ಷಣಿಕ ಸಾಲ ಯೋಜನೆ | 250 | 1000.00 |
| 5 | ವಿದೇಶಿ ವ್ಯಾಸಂಗ ಸಾಲ ಯೋಜನೆ | 100 | 1000.00 |
| 6 | ಮರಾಠ ಮಿಲ್ಟ್ರಿ ಹೋಟೆಲ್ | 40 | 100.00 |
| 8 | ನಿಗಮದ ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸುವ (ಓರಿಯಂಟೇಶನ್) ಕಾರ್ಯಕ್ರಮದ ವೆಚ್ಚ | – | 73.00 |
| 9 | ಆಡಳಿತಾತ್ಮಕ ವೆಚ್ಚ | – | 427.00 |
| | | **10,746** | **10000.00** |

**IV. ಯೋಜನೆಗಳ ವಿವರ:–**

ಮರಾಠ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ಸೇರಿದ ಜನರ ಆರ್ಥಿಕಾಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಒದಗಿಸಿದ ಅನುದಾನದಿಂದ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತದಿಂದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ನಿಗಮವು ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಯೋಜನೆಗಳ ಸಂಕ್ಷಿಪ್ತ ಮಾಹಿತಿ ಈ ರೀತಿ ಇದೆ.

**1)“ಜೀಜಾವು–ಜಲಭಾಗ್ಯ ಯೋಜನೆ”(ಗಂಗಾ ಕಲ್ಯಾಣ ನೀರಾವರಿ ಯೋಜನೆ)ಯ ಮಾರ್ಗಸೂಚಿಗಳು.**

ಯೋಜನೆ ಉದ್ದೇಶ:– ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ 30.03.2002ರ ಪ್ರಕಾರ, ಹಿಂದುಳಿದ ವರ್ಗಗಳ ಪ್ರವರ್ಗ 3–ಬಿ ಅಡಿಯಲ್ಲಿ 2(ಎ) ರಿಂದ 2(ಎಫ್) ವರೆಗೆ ಬರುವ (ಎ)ಮರಾಠ, ಮರಾಠ, (ಬಿ) ಅರೆಕ್ಷತ್ರಿ, ಅರೆಮರಾಠ, ಆರ್ಯಮರಾಠ (ಸಿ)ಆರ್ಯ, ಆರ್ಯರು (ಡಿ)ಕೊಂಕಣಮರಾಠ (ಇ)ಕ್ಷತ್ರಿಯಮರಾಠ/ಕ್ಷತ್ರಿಯಮರಾಠ (ಎಫ್) ಕುಳವಾಡಿ ಜಾತಿಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣರೈತರು ಹೊಂದಿರುವ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಹೊಂದಿಲ್ಲದಿದ್ದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿ ಕೃಷಿ ಅಭಿವೃದ್ಧಿಗೆ ನೆರವು ನೀಡುವುದು.

**ಈ ಯೋಜನೆಯಲ್ಲಿ ಪ್ರಯೋಜನ ಪಡೆಯಲು ಇರಬೇಕಾದ ಅರ್ಹತೆಗಳು:–**

- ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ:30/03/2002ರ ಸಂಖ್ಯೆ ಸಕಇ 225 ಬಿಸಿಎ 2000 ಸರ್ಕಾರದ ಆದೇಶದಲ್ಲಿ ಗುರುತಿಸಿದ ಪ್ರವರ್ಗ 3–ಬಿ ಅಡಿಯಲ್ಲಿ 2(ಎ) ರಿಂದ 2(ಎಫ್) ವರೆಗೆ ಬರುವ (ಎ)ಮರಾಠ, ಮರಾಠ, (ಬಿ)ಅರೆಕ್ಷತ್ರಿ, ಅರೆ ಮರಾಠ, ಆರ್ಯಮರಾಠ (ಸಿ)ಆರ್ಯ, ಆರ್ಯರು (ಡಿ)ಕೊಂಕಣ ಮರಾಠ (ಇ)ಕ್ಷತ್ರಿಯ ಮರಾಠ/ಕ್ಷತ್ರಿಯ ಮರಾಠ (ಎಫ್) ಕುಳವಾಡಿ ಜಾತಿಗಳಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬಕ್ಕೆ ಸೇರಿದವರಾಗಿದ್ದು, ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 2 ಎಕರೆ ಜಮೀನು ಹೊಂದಿರಬೇಕು. ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.
- ಅರ್ಜಿದಾರರು ವ್ಯವಸಾಯ ವೃತ್ತಿಯನ್ನು ನಿರ್ವಹಿಸುತ್ತಿರಬೇಕು.
- ಅರ್ಜಿದಾರರ ವಾರ್ಷಿಕ ವರಮಾನವು ಗ್ರಾಮೀಣ ಪ್ರದೇಶದಲ್ಲಿ ರೂ.98,000/–ಗಳನ್ನು ಮೀರಿರಬಾರದು.
- ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
- ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳ ಮೇಲ್ಪಟ್ಟು ಸರ್ಕಾರದ/ನಿಗಮದ ಬೇರೆ ಯಾವುದಾದರೂ ಯೋಜನೆಗಳಲ್ಲಿ ಸಾಲ ಅಥವಾ ಇತರೆ ಆರ್ಥಿಕ ಸವಲತ್ತು ಪಡೆದಿರಬಾರದು.
- ಮಹಿಳೆಯರಿಗೆ ಈ ಯೋಜನೆಯಲ್ಲಿ ಶೇ.33ರಷ್ಟು ಮೀಸಲು ನಿಗದಿಪಡಿಸಿದೆ.
- ಅಂಗವಿಕಲರಿಗೆ ಈ ಯೋಜನೆಯಲ್ಲಿ ಶೇ.5ರಷ್ಟು ಮೀಸಲು ನಿಗದಿಪಡಿಸಿದೆ.
- ಒಂದು ಕುಟುಂಬದ ಒಬ್ಬ ಸದಸ್ಯರಿಗೆ ಮಾತ್ರ ಸೌಲಭ್ಯ ಒದಗಿಸಲಾಗುವುದು.
- 2022–23ನೇ ಸಾಲಿಗೆ ರೂ.2400.00ಲಕ್ಷಗಳ ಆರ್ಥಿಕ ಹಾಗೂ 960 ಭೌತಿಕ ಗುರಿ ನಿಗದಿಪಡಿಸಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ.
- ನಿಗಮದ ನಿರ್ದೇಶಕ ಮಂಡಳಿಯು ಕಾಲಕಾಲಕ್ಕೆ ವಿಧಿಸುವ ಇನ್ನಿತರ ಅರ್ಹತೆಗಳನ್ನು ಹೊಂದಿದವರಾಗಿರಬೇಕು.

**2) ಶಹಾಜಿ ರಾಜೇ ಸಮೃದ್ಧಿ ಯೋಜನೆ (ಸ್ವಯಂ ಉದ್ಯೋಗ ನೇರ ಸಾಲ ಯೋಜನೆ):**

ಮರಾಠ ಸಮುದಾಯಗಳಿಗೆ ಸೇರಿದ ಗ್ರಾಮಾಂತರ ಪ್ರದೇಶವರಿಗೆ ರೂ.98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳಿಗಿಂತ ಕಡಿಮೆ ವಾರ್ಷಿಕ ಆದಾಯ ಹೊಂದಿರುವವರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ, ಚಟುವಟಿಕೆಗಳಾದ ಸಣ್ಣ ವ್ಯಾಪಾರ, ಸೇವಾ ವಲಯ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯಧನ ಒದಗಿಸಲಾಗುತ್ತಿದೆ.

1. ಘಟಕ ವೆಚ್ಚ ರೂ.50,000/–ಗಳಿಗೆ ಶೇ.30 ರಷ್ಟು ಗರಿಷ್ಟ ರೂ.10,000/–ಗಳ ಸಹಾಯಧನ ಉಳಿಕೆ ಶೇ.70ರಷ್ಟು ರೂ.40,000/–ಗಳನ್ನು ಶೇ.4ರ ಬಡ್ಡಿದರದಲ್ಲಿ ಸಾಲ.

2. ಘಟಕ ವೆಚ್ಚ ರೂ.50.001/–ರಿಂದ ರೂ.1,00,000/–ಗಳವರೆಗೆ ಶೇ.20ರಷ್ಟು ಗರಿಷ್ಟ ರೂ.20,000/–ಗಳ ಸಹಾಯಧನ ಉಳಿಕೆ ಶೇ.80ರಷ್ಟು ರೂ.80,000/–ಗಳನ್ನು ಶೇ.4ರ ಬಡ್ಡಿದರದಲ್ಲಿ ಸಾಲ.

3. ಘಟಕ ವೆಚ್ಚ ರೂ.1,00,001/–ರಿಂದ ರೂ.2,00,000/–ಗಳವರೆಗೆ ಶೇ.15 ರಷ್ಟು ಕನಿಷ್ಟ ರೂ.20,000/–ಗಳ ಗರಿಷ್ಟ ರೂ.30,000/–ಗಳ ಸಹಾಯಧನ ಉಳಿಕೆ ಶೇ.85ರಷ್ಟು ರೂ.1,70,000/–ಗಳನ್ನು ಶೇ.4ರ ಬಡ್ಡಿದರದಲ್ಲಿ ಸಾಲ.

2022–23ನೇ ಸಾಲಿಗೆ ರೂ.4500.000ಲಕ್ಷಗಳ ಆರ್ಥಿಕ ಹಾಗೂ 8706 ಭೌತಿಕ ಗುರಿ ನಿಗದಿ ಪಡಿಸಲಾಗಿದ್ದು, ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಚಾಲ್ತಿಯಲ್ಲಿದೆ.

**3. ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ:**

2022–23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಹಿಂದುಳಿದ ವರ್ಗಗಳ ಪ್ರವರ್ಗ–3ರಲ್ಲಿ ಬರುವ ಮರಾಠ ಜನಾಂಗದ ಯುವಜನರಿಗೆ ಕೌಶಲ್ಯ ಅಭಿವೃದ್ಧಿಪಡಿಸಿ ಉದ್ಯೋಗ ಮುಖಿಯನ್ನಾಗಿಸಲು ಸರ್ಕಾರದ ಸಂಸ್ಥೆಗಳಾದ ITI, GTTC, KGTTIರ ಮೂಲಕ ಅಂದಾಜು 88 ಅಲ್ಪಾವಧಿ ಕೋರ್ಸ್‌ಗಳ ಮೂಲಕ ಕೌಶಲ್ಯ ತರಬೇತಿ ನೀಡಲು "ಸ್ವಾತ್ರಂತ್ಯ ಅಮೃತ ಮಹೋತ್ಸವದ ಮುನ್ನಡೆ" ಯೋಜನೆ ಎಂಬ ಹೊಸ ಯೋಜನೆಯನ್ನು ಆರಂಭಿಸಲು ಮಾರ್ಗಸೂಚಿಗಳನ್ನು ಹೊರಡಿಸಿ ಆದೇಶಿಸಲಾಗಿರುತ್ತದೆ. ಸದರಿ ಮಾರ್ಗಸೂಚಿಗಳನ್ವಯ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗುತ್ತಿದೆ.

ಈ ಯೋಜನೆಯಿಂದ ಪಡೆಯಬಹುದಾದ ಪ್ರಯೋಜನಗಳು

- ಅಭ್ಯರ್ಥಿಗಳು ಸರ್ಕಾರದ ಸಂಸ್ಥೆಗಳಾದ ITI, GTTC, KGTTI ಗಳಲ್ಲಿ ಕೌಶಲ್ಯ ತರಬೇತಿ ಪಡೆದ ಯುವಕ ಅಥವಾ ಯುವತಿಯರಿಗೆ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ತರಬೇತಿ ಪ್ರಮಾಣ ಪತ್ರಗಳನ್ನು ನೀಡಲಾಗುವುದು.
- ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದಿಂದ ಏರ್ಪಡಿಸುವ ಉದ್ಯೋಗ ಮೇಳಗಳಲ್ಲಿ ಭಾಗವಹಿಸಿ ಉದ್ಯೋಗ ಪಡೆಯಲು ಅನುವು ಮಾಡಿಕೊಡಲಾಗುವುದು.

2022–23ನೇ ಸಾಲಿಗೆ ರೂ.1000.00ಲಕ್ಷಗಳ ಆರ್ಥಿಕ ಹಾಗೂ 394 ಭೌತಿಕ ಗುರಿ ನಿಗದಿಪಡಿಸಲಾಗಿದೆ. ತರಬೇತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

**4. ಅರಿವು–ಶೈಕ್ಷಣಿಕ ಸಾಲ:–**

ಮರಾಠ ಸಮುದಾಯಗಳಿಗೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿಪರ ಉನ್ನತ ಕೋರ್ಸ್‌ಗಳಲ್ಲಿ ಸಿ.ಇ.ಟಿ. ಮೂಲಕ ಪ್ರವೇಶ ಪಡೆದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ವಾರ್ಷಿಕ ಶೇ.2ರ ಬಡ್ಡಿದರದಲ್ಲಿ ವಾರ್ಷಿಕ ಗರಿಷ್ಠ ರೂ.1.00ಲಕ್ಷಗಳವರೆಗೆ ಸಾಲ ಮಂಜೂರು ಮಾಡಲಾಗುವುದು.

2022–23ನೇ ಸಾಲಿಗೆ ರೂ.1000.00ಲಕ್ಷಗಳ ಆರ್ಥಿಕ ಹಾಗೂ 250 ಭೌತಿಕ ಗುರಿ ನಿಗದಿಪಡಿಸಲಾಗಿದ್ದು, ಡಿಬಿಟಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

**5. ರಾಜಶ್ರೀ ಶಾಹು ಮಹಾರಾಜ ವಿದೇಶಿ ವ್ಯಾಸಂಗ ಯೋಜನೆ.**

ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 193 ಬಿಸಿಎ 2020, ದಿನಾಂಕ 27.11.2020 ಮತ್ತು ಹಿಂವಕ 193 ಬಿಸಿಎ 2020, ದಿನಾಂಕ 7.9.2021ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000,

ದಿನಾಂಕ 30.03.2002ರ ಪ್ರಕಾರ, ಪ್ರವರ್ಗ 3–ಬಿ ಅಡಿಯಲ್ಲಿ 2(ಎ) ರಿಂದ 2(ಎಫ್) ವರೆಗೆಬರುವ (ಎ)ಮರಾತ, ಮರಾಠ, (ಬಿ)ಅರೆಕ್ಷತ್ರಿ, ಅರೆಮರಾಠ, ಆರ್ಯಮರಾಠ (ಸಿ)ಆರ್ಯ, ಆರ್ಯರು (ಡಿ)ಕೊಂಕಣ ಮರಾಠ (ಇ)ಕ್ಷತ್ರಿಯಮರಾತ/ಕ್ಷತ್ರಿಯಮರಾಠ (ಎಫ್) ಕುಳವಾಡಿ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿದೇಶದಲ್ಲಿ ಉನ್ನತ ವ್ಯಾಸಂಗಕ್ಕೆ ಅಗತ್ಯವಾದ ಧನ ಸಹಾಯ ನೀಡುವ ಉದ್ದೇಶದಿಂದ ರಾಜಶ್ರೀ ಶಾಹು ಮಹಾರಾಜ ವಿದೇಶಿ ವ್ಯಾಸಂಗ ಯೋಜನೆಯನ್ನು ಜಾರಿಗೆ ತರಲಾಗಿದೆ, ಈ ಕೆಳಕಂಡ ಕೋರ್ಸ್‌ಗಳನ್ನು, ಸರ್ಕಾರ ಕಾಲಕಾಲಕ್ಕೆ ಹೊರಡಿಸಬಹುದಾದ ವಿದೇಶ / ವಿದೇಶಿ ವಿಶ್ವ ವಿದ್ಯಾಲಯ / ಸಂಸ್ಥೆಗಳಲ್ಲಿ ಅಧ್ಯಯನ ಮಾಡಲುಅವಕಾಶವಿದೆ.

| Sl No | Fields of Study (ಅಧ್ಯಯನದ ಕ್ಷೇತ್ರಗಳು) |
|---|---|
| 1. | Engineering and Management |
| 2. | Pure Sciences and Applied Sciences |
| 3. | Agriculture Sciences and Medicine |
| 4. | International Commerce , Economics, Accounting Finance |
| 5. | Humanities , Social Science , Fine Arts and Law |

2022–23ನೇ ಸಾಲಿಗೆ ರೂ.1000.00ಲಕ್ಷಗಳ ಆರ್ಥಿಕ ಹಾಗೂ 100 ಭೌತಿಕ ಗುರಿ ನಿಗದಿಪಡಿಸಲಾಗಿದ್ದು, ಡಿಬಿಟಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

**6. ಮರಾಠ ಮಿಲ್ಟ್ರಿ ಹೋಟೆಲ್ ಯೋಜನೆ.**

ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದ ನಿರ್ದೇಶನದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**V) 2022–23ನೇ ಸಾಲಿನ ಪ್ರಗತಿ:–**

ನಿಗಮದಿಂದ 2022–23ನೇ ಸಾಲಿನ ಯೋಜನೆಗಳಿಗೆ ನಿಗದಿಪಡಿಸಿದ ಗುರಿ ಹಾಗೂ ಡಿಸೆಂಬರ್–2022ರ ಅಂತ್ಯದವರೆಗೆ ಸಾಧಿಸಿದ ಪ್ರಗತಿ ವಿವರ ಈ ರೀತಿ ಇದೆ.

**(ಲಕ್ಷ ರೂ.ಗಳಲ್ಲಿ)**

| ಕ್ರ. ಸಂ | ಯೋಜನೆ | ಗುರಿ | | ಪ್ರಗತಿ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಜೀಜಾವು–ಜಲಭಾಗ್ಯ ಯೋಜನೆ(ಗಂಗಾ ಕಲ್ಯಾಣ ನೀರಾವರಿ ಯೋಜನೆ) | 960 | 2400.00 | – | – |
| 2 | ಶ್ರೀ ಶಹಜೀರಾಜೇ ಸಮೃದ್ಧಿ ಯೋಜನೆ (ಎಸ್.ಎಸ್.ಆರ್.ಎಸ್.ವೈ) (ಸ್ವಯಂ ಉದ್ಯೋಗ ನೇರ ಸಾಲ ಮತ್ತು ಸಹಾಯಧನ ಯೋಜನೆ) | 8706 | 4500.00 | – | – |
| 3 | ಅಮೃತ್ ಯೋಜನೆ (ಅಮೃತ್ ಮುನ್ನಡೆ) | 392 | 1000.00 | – | – |
| 4 | ಅರಿವು ಶೈಕ್ಷಣಿಕ ಸಾಲ ಯೋಜನೆ | 250 | 1000.00 | – | – |
| 5 | ವಿದೇಶಿ ವ್ಯಾಸಂಗ ಸಾಲ ಯೋಜನೆ | 100 | 1000.00 | – | – |
| 6 | ಮರಾಠ ಮಿಲ್ಟ್ರಿ ಹೋಟೆಲ್ | 40 | 100.00 | – | |

| ಕ್ರ ಸಂ | ಯೋಜನೆ | ಗುರಿ | | ಪ್ರಗತಿ | |
|---|---|---|---|---|---|
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 8 | ನಿಗಮದ ಉದ್ಘಾಟನೆ ಹಾಗೂ ಫಲಾನುಭವಿಗಳಿಗೆ ನಿಗಮದ ಯೋಜನೆಗಳ ಬಗ್ಗೆ ಅರಿವು ಮೂಡಿಸುವ (ಓರಿಯಂಟೇಶನ್) ಕಾರ್ಯಕ್ರಮದ ವೆಚ್ಚ | – | 73.00 | – | – |
| 9 | ಆಡಳಿತಾತ್ಮಕ ವೆಚ್ಚ | – | 427.00 | | |
| | | **10,746** | **10000.00** | – | – |

ಮೇಲ್ಕಂಡ ಯೋಜನೆಗಳಲ್ಲಿ ಫಲಾನುಭವಿಗಳ ಆಯ್ಕೆ ಮತ್ತು ಸಾಲ ಮಂಜೂರಾತಿ ಹಾಗೂ ತರಬೇತಿ ಕಾರ್ಯಗಳು ಪ್ರಗತಿಯಲ್ಲಿರುತ್ತದೆ.

VI) **ಪೂರಕ ಆಯವ್ಯಯದಲ್ಲಿನ ಅನುದಾನದ ವಿವರ.**

ರಾಜ್ಯ ಸರ್ಕಾರವು 2022–23ರ ಸಾಲಿನ ಆಯವ್ಯಯದಲ್ಲಿ ನಿಗಮಕ್ಕೆ ರೂ.50.00ಕೋಟಿ ಪೂರಕ ಆಯವ್ಯಯದಲ್ಲಿ ನಿಗಮಕ್ಕೆ 60.00ಕೋಟಿ ರೂ.ಗಳ ಅನುದಾನವನ್ನು ಒದಗಿಸಿರುತ್ತದೆ. ಒಟ್ಟಾರೆಯಾಗಿ ನಿಗಮಕ್ಕೆ ರೂ.70.00ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.

# ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ

**1. ಆಯೋಗದ ಪ್ರಕಾರ್ಯಗಳು:**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995ರ ಪರಿಚ್ಛೇದ 9(1) ರಂತೆ ಆಯೋಗವು ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸುತ್ತದೆ.

1) ನಾಗರೀಕರ ಯಾವುದೇ ವರ್ಗವನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಬಂದ ಕೋರಿಕೆಗಳನ್ನು ಪರಿಶೀಲಿಸುವುದು, ಯಾವುದೇ ಹಿಂದುಳಿದ ವರ್ಗವನ್ನು ಅಂತಹ ಪಟ್ಟಿಯಲ್ಲಿ ಹೆಚ್ಚಾಗಿ ಸೇರಿಸಲಾಗಿದೆ ಎಂದು ಅಥವಾ ಸೇರಿಸಲಾಗಿಲ್ಲವೆಂದು ಬಂದ ದೂರುಗಳ ವಿಚಾರಣೆ ಮಾಡುವುದು ಮತ್ತು ಸರ್ಕಾರಕ್ಕೆ ಅದು ಸೂಕ್ತವೆಂದು ತೋರುವ ಸಲಹೆಯನ್ನು ನೀಡುವುದು.
2) ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಮತ್ತು ಸಮಸ್ಯೆಗಳ ಬಗ್ಗೆ ಸರ್ವೆ ಮಾಡುವುದು.
3) ಹಿಂದುಳಿದ ವರ್ಗಗಳಿಗಾಗಿ ಇರುವ ಅನೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಮಾಡುವುದು.

**2. ಆಯೋಗದ ಅಧಿಕಾರಗಳು:**

ಆಯೋಗದ ಅಧಿನಿಯಮ 1995ರ ಪರಿಚ್ಛೇಧ–10ರಂತೆ ಆಯೋಗವು ಸಿವಿಲ್ ನ್ಯಾಯಾಲಯವು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಪಡೆದಿದೆ. ಮೇಲೆ ಕಾಣಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಕೆಳಕಾಣಿಸಿದ ಅಧಿಕಾರವನ್ನು ಆಯೋಗಕ್ಕೆ ನೀಡಲಾಗಿದೆ.

ಅ. ರಾಜ್ಯದ ಯಾವುದೇ ಭಾಗದಿಂದ ಯಾವುದೇ ವ್ಯಕ್ತಿಯನ್ನು ಸಮನ್ಸ್ ಮಾಡುವುದು, ಅವರ ಹಾಜರಾತಿಯನ್ನು ಖಚಿತ ಪಡಿಸುವುದು ಮತ್ತು ಪ್ರಮಾಣದ ಮೂಲಕ ಅವರನ್ನು ವಿಚಾರಣೆ ಮಾಡುವುದು.

ಆ. ಅಗತ್ಯವಿದ್ದಲ್ಲಿ ಯಾವುದೇ ದಾಖಲೆಗಳನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು.

ಇ. ಅಫಿಡವಿಟ್‌ಗಳ ಮೂಲಕ ಸಾಕ್ಷ್ಯವನ್ನು ಪಡೆಯುವುದು.

ಈ. ಅಗತ್ಯವಿದ್ದಲ್ಲಿ ಯಾವುದೇ ನ್ಯಾಯಾಲಯ ಅಥವಾ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆ ಅಥವಾ ಅದರ ಪ್ರತಿಯನ್ನು ಪಡೆಯುವುದು.

ಉ. ಸಾಕ್ಷಿಗಳ ಮತ್ತು ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನ್ನುಗಳನ್ನು ಹೊರಡಿಸುವುದು.

ಊ. ನಿಯಮಿಸಬಹುದಾದಂತಹ ಇತರ ಯಾವುದೇ ವಿಷಯ.

**3. ಆಯೋಗದ ರಚನೆ:**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧಿನಿಯಮ 1995 ರ ಪರಿಚ್ಛೇಧ–3 (2)(ಎ) ರಂತೆ ಒಬ್ಬ ಅಧ್ಯಕ್ಷರು ಹಾಗೂ 3(ಸಿ) ರಂತೆ ಐವರು ಸದಸ್ಯರುಗಳನ್ನು ನೇಮಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಅಧ್ಯಕ್ಷರು ಹಾಗೂ ಸದಸ್ಯರುಗಳು ಅವರ ಹೆಸರಿನ ಎದುರಿಗೆ ಸೂಚಿಸಿರುವ ದಿನಾಂಕದಿಂದ ಕಾರ್ಯನಿರ್ವಹಿಸುತ್ತಿರುತ್ತಾರೆ.

| ಹೆಸರು | ಪದನಾಮ | ಅಧಿಕಾರ ಸ್ವೀಕರಿಸಿದ ದಿನ |
|---|---|---|
| ಶ್ರೀ ಜಯಪ್ರಕಾಶ್ ಹೆಗ್ಡೆ | ಅಧ್ಯಕ್ಷರು | 26.11.2020 |
| ಶ್ರೀ ಕಲ್ಯಾಣ್ ಕುಮಾರ್ ಹೆಚ್.ಎಸ್ | ಸದಸ್ಯರು | 27.11.2020 |
| ಶ್ರೀ ರಾಜಶೇಖರ್ ಬಿ.ಎಸ್ | ಸದಸ್ಯರು | 27.11.2020 |

| ಹೆಸರು | ಪದನಾಮ | ಅಧಿಕಾರ ಸ್ವೀಕರಿಸಿದ ದಿನ |
|---|---|---|
| ಶ್ರೀ ಸುವರ್ಣ ಕೆ.ಟಿ | ಸದಸ್ಯರು | 01.12.2020 |
| ಶ್ರೀ ಅರುಣ್ ಕುಮಾರ್ | ಸದಸ್ಯರು | 01.12.2020 |
| ಶ್ರೀಮತಿ ಶಾರದಾ ನಾಯ್ಕ | ಸದಸ್ಯರು | 03.01.2022 |

**4. ಆಯೋಗದ ಅಧಿಕಾರಿ/ಸಿಬ್ಬಂದಿಯ ವಿವರ**

ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಆಯೋಗದ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯೋಗಕ್ಕೆ ಮಂಜೂರಾಗಿರುವ, ಭರ್ತಿ ಮಾಡಲಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳು ಈ ಕೆಳಗಿನಂತಿವೆ.

| ಗ್ರೂಪ್ | ಮಂಜೂರಾದ ಹುದ್ದೆಗಳ ಸಂಖ್ಯೆ | ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|
| ಎ | 03 | 01 | 02 |
| ಬಿ | 02 | 0 | 02 |
| ಸಿ | 23 | 04 | 19 |
| ಡಿ | 04 | 2 | 02 |
| **ಒಟ್ಟು** | **32** | **07** | **25** |

**5. ಆಯೋಗಕ್ಕೆ ಒದಗಿಸಿರುವ ಅನುದಾನ:**

ಆರ್ಥಿಕ ವರ್ಷ 2022-23ನೇ ಸಾಲಿನಲ್ಲಿ ಆಯೋಗದ ಕಾರ್ಯನಿರ್ವಹಣೆಗಾಗಿ ಲೆಕ್ಕಶೀರ್ಷಿಕೆ: 2225-03-102-3-09 ರಡಿ ಡಿಸೆಂಬರ್-2022ರ ಅಂತ್ಯಕ್ಕೆ ರೂ.234.15 ಲಕ್ಷಗಳು ಬಿಡುಗಡೆಯಾಗಿದ್ದು, **ರೂ.234.15** ಲಕ್ಷಗಳು ವೆಚ್ಚವಾಗಿರುತ್ತದೆ. ಈ ಅನುದಾನವನ್ನು ಆಯೋಗದ ಅಧ್ಯಕ್ಷರು, ಸದಸ್ಯರುಗಳು, ಅಧಿಕಾರಿ/ಸಿಬ್ಬಂದಿಗಳ ವೇತನ, ಹೊರ ಸಂಪನ್ಮೂಲ ಸಿಬ್ಬಂದಿ ಸೇವಾ ವೆಚ್ಚ, ಆಯೋಗದ ವಾಹನಗಳ ನಿರ್ವಹಣೆ, ಕಛೇರಿ ವೆಚ್ಚ ಮತ್ತು ಇತರೆ ವೆಚ್ಚಗಳಿಗಾಗಿ ಖರ್ಚು ಮಾಡಲಾಗಿದೆ.

**6. ಆಯೋಗದ ಕಾರ್ಯಚಟುವಟಿಕೆಗಳು:**

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಪ್ರಸ್ತುತ ಹೊಸದಾಗಿ ದಿನಾಂಕ: 26.11.2020 ರಿಂದ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರದ ಅಧಿನಿಯಮ 1995 ರ ಕಲಂ 9(1)ರಲ್ಲಿ ಆಯೋಗವು ವಿವಿಧ ಸಂಘಸಂಸ್ಥೆಗಳು ಸಲ್ಲಿಸಿರುವ ಅಹವಾಲುಗಳನ್ನು ಸ್ವೀಕರಿಸಿ ಬಹಿರಂಗ ವಿಚಾರಣೆಗಳನ್ನು ನಡೆಸಲಾಗುತ್ತಿರುತ್ತದೆ. ಈ ಸಂಬಂಧ ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗುತ್ತಿದ್ದು, ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಆಯೋಗದಿಂದ ಯಾವುದೇ ಯೋಜನೆಗಳು ಇರುವುದಿಲ್ಲ. ಆದುದರಿಂದ, ಗುರಿ ಮತ್ತು ಸಾಧನೆಗಳನ್ನು ನಿಗದಿಪಡಿಸಿರುವುದಿಲ್ಲ.

# ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆ

ಕರ್ನಾಟಕ ರಾಜ್ಯದಲ್ಲಿನ ಹಿಂದುಳಿದ ವರ್ಗಗಳ ಕ್ಷೇಮಾಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ: ಸಕಇ/28/ಬಿಸಿಎ/90/ದಿನಾಂಕ:31-08-1992 ರಂತೆ ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಿರುತ್ತದೆ. ಈ ಸಂಸ್ಥೆಯು ದಿನಾಂಕ: 20-08-1993 ರಿಂದ ಕಾರ್ಯ ನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳ ಹಾಗೂ ಅಲೆಮಾರಿ/ಅರೆ-ಅಲೆಮಾರಿ ಜನಾಂಗಗಳ ಸಂಶೋಧನಾ ಅಧ್ಯಯನ/ ಕುಲಶಾಸ್ತ್ರೀಯ ಅಧ್ಯಯನ, ಈ ವರ್ಗಗಳಿಗಾಗಿ ಕೈಗೊಂಡಿರುವ ಯೋಜನೆಗಳ ಬಗ್ಗೆ ಪ್ಲಾನ್ ಮಾನಿಟರಿಂಗ್, ವಿಚಾರ ಸಂಕಿರಣ, ವಿಚಾರಗೋಷ್ಠಿ, ತರಬೇತಿ ಕಾರ್ಯಾಗಾರ, ಸಮೀಕ್ಷೆ/ಮೌಲ್ಯಮಾಪನ, ಪುಸ್ತಕ ಪ್ರಕಟಣೆ, ಸಾಕ್ಷ್ಯಚಿತ್ರ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ನಡೆಸುವುದು ಈ ಸಂಸ್ಥೆಯಧ್ಯೇಯೋದ್ದೇಶವಾಗಿದೆ. ಈ ಕಾರ್ಯಕ್ರಮಗಳನ್ನು ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಸಲಹೆಗಳನ್ನು ಪಡೆದು ಸರ್ಕಾರದ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ/20/ಬಿಸಿಎ/90/ದಿನಾಂಕ: 04-08-1993ರ ಪ್ರಕಾರ ಹಮ್ಮಿಕೊಂಡು ಆಚರಣೆಗೆ ತರುತ್ತಿದೆ.

ದೇವರಾಜ ಅರಸು ಸಂಶೋಧನಾ ಸಂಸ್ಥೆಯು ರಾಜ್ಯ ವಲಯ ಯೋಜನೆಗೆ ಸೇರ್ಪಡೆಯಾಗಿದ್ದು, ಪ್ರತಿ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯವ್ಯಯದಡಿಯಲ್ಲಿ ಹಣಕಾಸಿನ ವ್ಯವಸ್ಥೆ ಒದಗಿಸಲಾಗುತ್ತಿದೆ. ಈ ಸಂಸ್ಥೆಗೆ ಒಟ್ಟು 26 ಹುದ್ದೆಗಳು ಮಂಜೂರಾಗಿದ್ದು, ಎಲ್ಲಾ ಹುದ್ದೆಗಳನ್ನು ನಿಯೋಜನೆ ಮೇರೆಗೆ ತುಂಬಲಾಗಿದೆ. ನಿರ್ದೇಶಕರು ಈ ಸಂಸ್ಥೆಯ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇವರ ಅಧೀನದಲ್ಲಿ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರ ಹುದ್ದೆಗಳಿದ್ದು, ಪ್ರಸ್ತುತ ನಿರ್ದೇಶಕರು, ಉಪ ನಿರ್ದೇಶಕರು (ಪ್ರಭಾರ) ಹಾಗೂ 6 ಸಿಬ್ಬಂದಿ ವರ್ಗದವರು ಸಂಸ್ಥೆಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿರ್ದೇಶಕರಿಗೆ ಸಹಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯು ದಿನಾಂಕ:20-08-1993 ರಂದು ಕಾರ್ಯಾರಂಭಗೊಂಡಿದ್ದು, ಬೆಂಗಳೂರು ನಗರದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಈ ಸಂಸ್ಥೆಯ ಅಧೀನ ಕಛೇರಿಗಳು ಇರುವುದಿಲ್ಲ. ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಅಧಿಕಾರಿಗಳ ಮುಖಾಂತರ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### 2022-23 ನೇ ಸಾಲಿನ ಕಾರ್ಯಕ್ರಮಗಳು

- 2022-23 ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ರೂ. 18.75 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಸರ್ಕಾರದ ಆದೇಶ ದಿನಾಂಕ:ಬಿಸಿಡಬ್ಲ್ಯೂ 611 ಬಿಎಂಎಸ್ 2022 ಬೆಂಗಳೂರು ದಿನಾಂಕ: 17.11.2022 ರಲ್ಲಿ ಸದರಿ ಅನುದಾನಕ್ಕೆ ಈ ಕೆಳಕಂಡ ಯೋಜನಾ ಕಾರ್ಯಕ್ರಮಗಳನ್ನು ನಡೆಸಲು ಅನುಮೋದನೆ ಹಾಗೂ ಆದೇಶ ನೀಡಲಾಗಿರುತ್ತದೆ.
- ರಾಜ್ಯದ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಕುಲಶಾಸ್ತ್ರೀಯ ಅಧ್ಯಯನ
  : ರೂ. 10.00 ಲಕ್ಷ
- ಸದರಿ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಸಮಗ್ರ ಸ್ಥಿತಿ-ಗತಿಗಳ ಕುರಿತು ರಾಜ್ಯಮಟ್ಟದ ವಿಚಾರ ಸಂಕಿರಣ : ರೂ. 4.00 ಲಕ್ಷ
- ಸದರಿ ಮೈಸೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಸಮಗ್ರ ಅಭಿವೃದ್ಧಿಗಾಗಿ ರಾಜ್ಯಮಟ್ಟದ ಕಾರ್ಯಾಗಾರ : ರೂ. 2.00 ಲಕ್ಷ

- ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯ ವತಿಯಿಂದ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) (1) ಸಾಮಾಜಿಕ ಸ್ಥಿತಿ–ಗತಿ (2) ಧಾರ್ಮಿಕ–ಸಾಂಸ್ಕೃತಿಕ ಸ್ಥಿತಿ–ಗತಿ ಹಾಗೂ (3) ಆರ್ಥಿಕ–ಶೈಕ್ಷಣಿಕ–ಔದ್ಯೋಗಿಕ ಸ್ಥಿತಿ–ಗತಿಗಳ ಕುರಿತು 3 ಸಾಕ್ಷ್ಯಚಿತ್ರಗಳು : ರೂ. 2.75 ಲಕ್ಷ

ಒಟ್ಟು ಮೊತ್ತ : ರೂ. 18.75 ಲಕ್ಷ

- ಮೇಲ್ಕಂಡ ಸರ್ಕಾರಿ ಆದೇಶದಂತೆ ವಿಶ್ವಕರ್ಮ ಜನಾಂಗದ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) ಕುಲಶಾಸ್ತ್ರೀಯ ಅಧ್ಯಯನ, ವಿಚಾರ ಸಂಕಿರಣ ಹಾಗೂ ಕಾರ್ಯಾಗಾರಗಳನ್ನು ನಡೆಸಲು ಮೈಸೂರು ವಿಶ್ವವಿದ್ಯಾನಿಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ, ಮಾನವಿಕ ವಿಭಾಗಗಳು, ಮೈಸೂರು ಇದರ ಸಹಪ್ರಾಧ್ಯಾಪಕರಾಗಿರುವ ಡಾ॥ ಡಿ.ಸಿ. ನಂಜುಂಡ ರವರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡು ಕಾರ್ಯಾದೇಶವನ್ನು ನೀಡಲಾಗಿದೆ. ನಿಗದಿಪಡಿಸಿರುವ ಅನುದಾನ ಒಟ್ಟು ರೂ.16.00 ಲಕ್ಷಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಿಡುಗಡೆಗೊಳಿಸಬೇಕಾಗಿದೆ.

- ಈ ಸಂಸ್ಥೆಯವತಿಯಿಂದ ವಿಶ್ವಕರ್ಮ ಜನಾಂಗ ಹಾಗೂ ಅದರ ಉಪಪಂಗಡಗಳ (ಗೆಜ್ಜೆಗಾರ ಜನಾಂಗ ಒಳಗೊಂಡಂತೆ) (1) ಸಾಮಾಜಿಕ ಸ್ಥಿತಿ–ಗತಿ (2) ಧಾರ್ಮಿಕ–ಸಾಂಸ್ಕೃತಿಕ ಸ್ಥಿತಿ–ಗತಿ ಹಾಗೂ (3) ಆರ್ಥಿಕ–ಶೈಕ್ಷಣಿಕ–ಔದ್ಯೋಗಿಕ ಸ್ಥಿತಿ–ಗತಿಗಳ ಕುರಿತು 3 ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲು ನಿಯಮಾನುಸಾರ ಕೊಟೇಷನ್ ಕರೆದು, ಚಲನ ವಿಷ್ಯುಯಲ್ಸ್, ಬೆಂಗಳೂರು, ಇವರಿಗೆ ಕಾರ್ಯಾದೇಶವನ್ನು ನೀಡಲಾಗಿದೆ. ಸದರಿ 3 ಸಾಕ್ಷ್ಯಚಿತ್ರಗಳ ನಿರ್ಮಾಣದ ನಂತರ ನಿಗಧಿಪಡಿಸಿದ ಹಣವನ್ನು ಬಿಡುಗಡೆಗೊಳಿಸಲಾಗುವುದು.

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ

ಸನ್ಮಾನ್ಯ ಮುಖ್ಯಮಂತ್ರಿಯವರು 2015-16ರ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರವು ಸಂಸದೀಯ ವ್ಯವಹಾರಗಳ ಸಚಿವಾಲಯದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 48 ಶಾಸನ 2015 ಬೆಂಗಳೂರು, ದಿನಾಂಕ:05.05.2016 ರಲ್ಲಿ ಸ್ಥಾಪಿಸಲಾಗಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಕ್ಷೇತ್ರ ಅಂದರೆ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನಂದಗಡ ಮತ್ತು ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮಗಳನ್ನು ಅಂತರರಾಷ್ಟ್ರೀಯ ಪಾರಂಪರಿಕ ತಾಣವನ್ನಾಗಿ, ಸಾಂಸ್ಕೃತಿಕ ಮತ್ತು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ ಪಡಿಸುವುದು ಪ್ರಾಧಿಕಾರದ ಉದ್ದೇಶವಾಗಿರುತ್ತದೆ.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ 2022-23ನೇ ಸಾಲಿನ ವಾರ್ಷಿಕ ವರದಿಯು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರುತ್ತದೆ.

I. ಪ್ರಾಧಿಕಾರದ ಸದಸ್ಯರುಗಳು

II. ಪ್ರಾಧಿಕಾರದ ಆಡಳಿತಾತ್ಮಕ ವ್ಯವಸ್ಥೆ.

III. 2022-23ನೇ ಸಾಲಿನ ಆಯವ್ಯಯ.

IV. ಪ್ರಾಧಿಕಾರದಿಂದ ಹಮ್ಮಿಕೊಂಡಿರುವ ಯೋಜನೆಗಳ ವಿವರಗಳು.

V. 2022-23ನೇ ಸಾಲಿನ ಕಾಮಗಾರಿಯ ಪ್ರಗತಿಯ ವಿವರ

## I. ಪ್ರಾಧಿಕಾರದ ಸದಸ್ಯರುಗಳು:

ಪ್ರಾಧಿಕಾರದ ಮೇಲ್ವಿಚಾರಣೆ ಮತ್ತು ಕಾರ್ಯನೀತಿ ರೂಪಿಸಲು ಸದಸ್ಯರುಗಳನ್ನು ಒಳಗೊಂಡ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಈ ಕೆಳಕಂಡವರು ಪ್ರಾಧಿಕಾರ ಸದಸ್ಯರುಗಳಾಗಿರುತ್ತಾರೆ.

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು, | ಅಧ್ಯಕ್ಷರು |
| 2 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು, | ಸಹ ಅಧ್ಯಕ್ಷರು |
| 3 | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, | ಪದನಿಮಿತ್ತ ಸದಸ್ಯರು |
| 4 | ಕಂದಾಯ ಇಲಾಖೆ ಸಚಿವರು. | ಪದನಿಮಿತ್ತ ಸದಸ್ಯರು |
| 5 | ಬೆಳಗಾವಿ ಜಿಲ್ಲೆಯ ಉಸ್ತುವಾರಿ ಸಚಿವರು | ಪದನಿಮಿತ್ತ ಸದಸ್ಯರು |
| 6 | ಸಂಗೊಳ್ಳಿ ರಾಯಣ್ಣ ಕ್ಷೇತ್ರದ ಭಾಗಶಃ ಅಥವಾ ಸಂಪೂರ್ಣವಾಗಿ ಯಾರ ಯಾರ ಚುನಾವಣಾ ಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತದೋ ಆ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನಮಂಡಲದ ಸದಸ್ಯರು; | ಸದಸ್ಯರು |
| 7 | ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಬೆಳಗಾವಿ | ಪದನಿಮಿತ್ತ ಸದಸ್ಯರು |
| 8 | ಸರ್ಕಾರದ ಕಾರ್ಯದರ್ಶಿಗಳು,<br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಪದನಿಮಿತ್ತ ಸದಸ್ಯರು |
| 9 | ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಪದನಿಮಿತ್ತ ಸದಸ್ಯರು |
| 10 | ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ, | ಪದನಿಮಿತ್ತ ಸದಸ್ಯರು |
| 11 | ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ | ಪದನಿಮಿತ್ತ ಸದಸ್ಯರು |
| 12 | ಸರ್ಕಾರದ ಕಾರ್ಯದರ್ಶಿಗಳು,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ | ಪದನಿಮಿತ್ತ ಸದಸ್ಯರು |

| ಕ್ರ.ಸಂ | ಹೆಸರು | ಪದನಾಮ |
|---|---|---|
| 13 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,<br>ಕೆರೆ ಅಭಿವೃದ್ಧಿ ಪ್ರಾಧಿಕಾರ | ಪದನಿಮಿತ್ತ ಸದಸ್ಯರು |
| 14 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,<br>ಜಿಲ್ಲಾ ಪಂಚಾಯಿತಿ. ಬೆಳಗಾವಿ | ಪದನಿಮಿತ್ತ ಸದಸ್ಯರು |
| 15 | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, | ಪದನಿಮಿತ್ತ ಸದಸ್ಯರು |
| 16 | ಆಯುಕ್ತರು, ಪ್ರವಾಸೋದ್ಯಮ ಇಲಾಖೆ, | ಪದನಿಮಿತ್ತ ಸದಸ್ಯರು |
| 17 | ಕಾರ್ಯನಿರ್ವಾಹಕ ಅಧಿಕಾರಿ,<br>ತಾಲ್ಲೂಕು ಪಂಚಾಯಿತಿ, ಖಾನಾಪುರ ತಾಲ್ಲೂಕು | ಪದನಿಮಿತ್ತ ಸದಸ್ಯರು |
| 18 | ಕಾರ್ಯನಿರ್ವಾಹಕ ಅಧಿಕಾರಿ,<br>ತಾಲ್ಲೂಕು ಪಂಚಾಯಿತಿ, ಬೈಲಹೊಂಗಲ ತಾಲ್ಲೂಕು | ಪದನಿಮಿತ್ತ ಸದಸ್ಯರು |
| 19 | ಅಧ್ಯಕ್ಷರು, ಗ್ರಾಮ ಪಂಚಾಯಿತಿ, ನಂದಗಡ. | ಪದನಿಮಿತ್ತ ಸದಸ್ಯರು |
| 20 | ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಸಂಗೊಳ್ಳಿ, | ಪದನಿಮಿತ್ತ ಸದಸ್ಯರು |
| 21 | ಪ್ರಾಧಿಕಾರದ ಆಯುಕ್ತರು | ಸದಸ್ಯ ಕಾರ್ಯದರ್ಶಿ |

**II. ಪ್ರಾಧಿಕಾರದ ಆಡಳಿತಾತ್ಮಕ ವ್ಯವಸ್ಥೆ:-**

ಪ್ರಾಧಿಕಾರದಲ್ಲಿ ಆಯುಕ್ತರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಧಿಕಾರಿಯಾಗಿರುತ್ತಾರೆ. ಪ್ರಸ್ತುತ ಸರ್ಕಾರದ ಆದೇಶ ಸಂಖ್ಯೆ:- ಹಿಂವಕ 174 ಬಿಸಿಎ 2016 ಬೆಂಗಳೂರು ದಿನಾಂಕ 05.01.2017 ರನ್ವಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರ ಹುದ್ದೆಯ ಕಾರ್ಯಭಾರ ವಹಿಸಿಕೊಂಡು ಕಾರ್ಯ ನಿರ್ವಹಿಸುತ್ತಿರುತ್ತಾರೆ.

**III. 2022-23ನೇ ಸಾಲಿನ ಆಯವ್ಯಯ.**

ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ರೂ. 5253.00 ಲಕ್ಷಗಳನ್ನು ಒದಗಿಸಿ ಈ ಮೊತ್ತದಲ್ಲಿ ಡಿಸೆಂಬರ್ ಅಂತ್ಯಕ್ಕೆ ಮೂರು ಕಂತುಗಳಲ್ಲಿ ರೂ. 3939.75 ಲಕ್ಷಗಳನ್ನು ಬಿಡುಗಡೆ ಮಾಡಿದೆ ಹಾಗೂ 2022-23ನೇ ಸಾಲಿನ ಪೂರಕ ಅಂದಾಜಿನಲ್ಲಿ ರೂ. 4109.00 ಲಕ್ಷಗಳನ್ನು ಒದಗಿಸಿ ಬಿಡುಗಡೆಗೊಳಿಸಿದೆ.

**IV. ಪ್ರಾಧಿಕಾರದಿಂದ ಹಮ್ಮಿಕೊಂಡಿರುವ ಯೋಜನೆಗಳ ವಿವರಗಳು.**

ದಿನಾಂಕ 18.07.2017ರಂದು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಥಮ ಸಭೆಯು ನಡೆದಿದ್ದು, ಈ ಸಭಾ ನಡವಳಿಯ ನಿರ್ಣಯದನ್ವಯ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಚಿವ ಸಂಪುಟದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ನಿರ್ಣಯಿಸಲಾಗಿರುತ್ತದೆ.

| ಕ್ರ. ಸಂ | ಕಾಮಗಾರಿಗಳು | ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ) |
|---|---|---|
| 1 | ಬೈಲಹೊಂಗಲ ತಾಲೂಕಿನ ಸಂಗೊಳ್ಳಿಯಲ್ಲಿ ರಾಯಣ್ಣ ಸ್ಮಾರಕ ಸೈನಿಕ ಶಾಲೆ ನಿರ್ಮಾಣ ಕಾಮಗಾರಿ | 15557.00 |
| 2 | ಖಾನಾಪುರ ತಾಲೂಕಿನ ನಂದಗಡದಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಾಯಣ್ಣ ಮ್ಯೂಸಿಯಂ(ವೀರಭೂಮಿ)ನಿರ್ಮಾಣ ಕಾಮಗಾರಿ | 7529.00 |

| ಕ್ರ. ಸಂ | ಕಾಮಗಾರಿಗಳು | ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ) |
|---|---|---|
| 3 | ನಂದಗಡದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಯಾತ್ರಿ ನಿವಾಸ ಹಾಗೂ ಇತರೆ ಕಾಮಗಾರಿ | 1800.00 |
| 4 | ಸಂಗೊಳ್ಳಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಾಕ್ ಗಾರ್ಡನ್ | 1460.00 |
| 5 | ನಂದಗಡ ಗ್ರಾಮದ ರಾಯಣ್ಣನ ಕೆರೆ ಅಭಿವೃದ್ಧಿ | 306.00 |
| 6 | ಬೈಲಹೊಂಗಲ ತಾಲೂಕಿನ ಸಂಗೊಳ್ಳಿಯಲ್ಲಿ ಕಲ್ಯಾಣ ಮಂಟಪ ನವೀಕರಣ, ಭೋಜನಾಲಯ ಹಾಗೂ ಇತರೇ ಕಾಮಗಾರಿಗಳು. | 115.00 |
| | ಒಟ್ಟು | 26767.00 |

ಸರ್ಕಾರದ ಆದೇಶ ಸಂಖ್ಯೆ ಹಿಂವಕ 265 ಬಿಸಿಎ 2017 ಬೆಂಗಳೂರು ದಿನಾಂಕ 01.12.2017 ರನ್ವಯ ಮೇಲ್ಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಚಿವ ಸಂಪುಟವು ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.

## V.2022-23ನೇ ಸಾಲಿನ ಕಾಮಗಾರಿಗಳ ಪ್ರಗತಿಯ ವಿವರ

| ಕ್ರ. ಸಂ | ಕಾಮಗಾರಿಗಳ ಹೆಸರು | ಅನುಮೋದಿತ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | 2022-23ನೇ ಸಾಲಿನ ಡಿಸೆಂಬರ್ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ವೆಚ್ಚ ಮಾಡಲಾದ ಮೊತ್ತ ಡಿಸೆಂಬರ್ ತಿಂಗಳ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) | ಪ್ರಗತಿಯ ಹಂತ |
|---|---|---|---|---|---|
| 1 | ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ನಿರ್ಮಾಣ ಕಾಮಗಾರಿ – ಸಂಗೊಳ್ಳಿ | 18487.30 | 8048.75 | 4800.83 | ಸೈನಿಕ ಶಾಲೆಯ ಎಲ್ಲಾ ಕಟ್ಟಡಗಳ ನಿರ್ಮಾಣ ಕಾಮಗಾರಿ ಮುಕ್ತಾಯಗೊಂಡಿದ್ದು, ಎಲ್ಲಾ ರೀತಿಯ ಸೇವೆಗಳನ್ನು ಅಂದರೆ ವಿದ್ಯುಚ್ಛಕ್ತಿ, ನೀರು ಸರಬರಾಜು, ಮತ್ತು ನೈರ್ಮಲಿಕರಣ ಕೆಲಸಗಳು ಪೂರ್ಣಗೊಂಡಿದೆ ಪ್ರವೇಶದ್ವಾರದ ಬಳಿ 40 ಮೀಟರ್ ಅಳತೆಯ ಕಾಂಪೌಂಡ್ ಕಟ್ಟದ ನಿರ್ಮಾಣವಾಗುತ್ತಿದ್ದು. ಇಲ್ಲಿಯವರೆಗೆ ಶೇ 98% ರಷ್ಟು ಭೌತಿಕ ಪ್ರಗತಿಯಲ್ಲಿರುತ್ತದೆ. |
| 2 | ಮ್ಯೂಜಿಯಂ (ವೀರಭೂಮಿ) ನಿರ್ಮಾಣ ಕಾಮಗಾರಿ –ನಂದಗಡ | 7765.90 | | 1110.31 | ಒಟ್ಟು 40 ವಿವಿಧ ಘಟಕಗಳು ನಿರ್ಮಾಣ ಕಾರ್ಯ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ ಇಲ್ಲಿಯವರೆಗೆ ಶೇ85%ರಷ್ಟು ಭೌತಿಕ ಪ್ರಗತಿಯಲ್ಲಿರುತ್ತದೆ. |
| 3 | ರಾಕ್ ಗಾರ್ಡ್‌ನ್ – ಸಂಗೊಳ್ಳಿ | 1278.00 | | 162.62 | ಒಟ್ಟು 965 ಕಲಾಕೃತಿಗಳನ್ನು ನಿರ್ಮಾಣ ಮುಕ್ತಾಯವಾಗಿರುತ್ತದೆ. ಕಥೆಗೆ ಅನುಗುಣವಾಗಿ ಕಲಾಕೃತಿಗಳನ್ನು |

| ಕ್ರ ಸಂ | ಕಾಮಗಾರಿಗಳ ಹೆಸರು | ಅನುಮೋದಿತ ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | 2022–23ನೇ ಸಾಲಿನ ಡಿಸೆಂಬರ್ ಅಂತ್ಯಕ್ಕೆ ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ವೆಚ್ಚ ಮಾಡಲಾದ ಮೊತ್ತ ಡಿಸೆಂಬರ್ ತಿಂಗಳ ಅಂತ್ಯಕ್ಕೆ (ರೂ.ಲಕ್ಷಗಳಲ್ಲಿ) | ಪ್ರಗತಿಯ ಹಂತ |
|---|---|---|---|---|---|
| | | | | | ಅಳವಡಿಸುವ ಪ್ರಕ್ರಿಯ ಹಾಗೂ ಸಿವಿಲ್ ಕಾಮಗಾರಿ ಪೈಂಟಿಂಗ್ ಕಾರ್ಯ ಪ್ರಗತಿಯಲ್ಲಿರುತ್ತದೆ. ಇಲ್ಲಿಯವರೆಗೆ ಶೇ 90% ರಷ್ಟು ಭೌತಿಕ ಪ್ರಗತಿಯಾಗಿರುತ್ತದೆ. |
| 4 | ಯಾತ್ರಿನಿವಾಸ ನಿರ್ಮಾಣ ಕಾಮಗಾರಿ – ನಂದಗಡ | 1800.00 | | 0.00 | ನಿವೇಶನವು ಎ.ಪಿ.ಎಂ.ಸಿ ನಂದಗಡದಿಂದ ಪ್ರಾಧಿಕಾರಕ್ಕೆ ಹಸ್ತಾಂತರವಾಗಬೇಕಿದೆ. |
| 5 | ಸಂಗೊಳ್ಳಿ ರಾಯಣ್ಣ ಕೆರೆ ಅಭಿವೃದ್ಧಿ ಕಾಮಗಾರಿ–ಸಂಗೊಳ್ಳಿ | 248.56 | | 52.99 | ಸದರಿ ಕಾಮಗಾರಿಯಡಿಯಲ್ಲಿ ಕೆರೆ ಹೂಳೆತ್ತುವುದು ಏರಿಯನ್ನು ಅಗಲಪಡಿಸಿ ಬಲಪಡಿಸುವುದು ಮತ್ತು ಬ್ರಿಡ್ಜ್ ನಿರ್ಮಾಣ ಕಾಮಗಾರಿ, ಸಂಗೊಳ್ಳಿ ರಾಯಣ್ಣ ಪ್ರತಿಮೆ ನಿರ್ಮಾಣಕ್ಕಾಗಿ ಆರ್.ಸಿ.ಸಿ ಫುಟ್ ಬ್ರಿಡ್ಜ್ ಪೂರ್ಣಗೊಂಡಿರುತ್ತದೆ ಮತ್ತು ಕರಬ್ ಸ್ಟೋನ್ ಅಳವಡಿಕೆ ಕೆಲಸ ಪ್ರಗತಿಯಲ್ಲಿದೆ, ಇಲ್ಲಿಯವರೆಗೆ ಶೇ98%ರಷ್ಟು ಭೌತಿಕ ಪ್ರಗತಿ ಪೂರ್ಣಗೊಂಡಿದೆ. |
| 6 | ಕಲ್ಯಾಣ ಮಂಟಪ ನವೀಕರಣ, ಭೋಜನಾಲಯ, ಮತ್ತು ಇತರೆ ಕಾಮಗಾರಿ – ಸಂಗೊಳ್ಳಿ | 144.72 | | 0.00 | ಈ ಕಾಮಗಾರಿಯ ಎಲ್ಲಾ ಕೆಲಸಗಳು ಮುಕ್ತಾಯಗೊಂಡಿದ್ದು, ದೇವಸ್ಥಾನಕ್ಕೆ ರಾಯಣ್ಣನ ಮೂರ್ತಿ ಸ್ಥಳಾಂತರಿಸುವ ಕೆಲಸ ಪ್ರಗತಿಯಲ್ಲಿದ್ದು ಇಲ್ಲಿಯವರೆಗೆ ಶೇ 100% ರಷ್ಟು ಭೌತಿಕವಾಗಿ ಪೂರ್ಣಗೊಂಡಿರುತ್ತದೆ. |
| | **ಒಟ್ಟು** | **29724.49** | **8048.75** | **6126.75** | |

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು. ಕಾ.ಸೂ.774 / ಪಿ5